ಸಂತೇಮರಹಳ್ಳಿಯಲ್ಲಿರುವ ಸರ್ಕಾರಿ ಬಸ್ಸುಗಳು

118 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮಾರಹಳ್ಳಿ ಕ್ಷೇತ್ರದಲ್ಲಿ ಇರುವ ಸರಕಾರಿ ಬಸ್ಸುಗಳು ಎಷ್ಟು?

ಆ) ಅವುಗಳಲ್ಲಿ ಸುಸ್ಥಿತಿಯಲ್ಲಿರುವ ಬಸ್ಸುಗಳು ಎಷ್ಟು?

ಇ) ಆ ಕ್ಷೇತ್ರದಲ್ಲಿರುವ ಸರ್ಕಾರಿ ಬಸಗಳನ್ನು ಹಿಂದಕ್ಕೆ ಪಡೆಯಲಾಗಿದೆಯೇ, ಒಂದು ವೇಳೆ ಹಿಂದಕ್ಕೆ ಪಡೆದಿದ್ದರೆ ಎಷ್ಟು ಬಸ್ಸುಗಳನ್ನು ಹಿಂದಕ್ಕೆ ಪಡೆಯಲಾಗಿದೆ.

ಈ) ಸರ್ಕಾರಿ ಬಸ್ಸುಗಳನ್ನು ಹಿಂದಕ್ಕೆ ಪಡೆದಿದ್ದಲ್ಲಿ ಅವುಗಳನ್ನು ಮರಳಿ ಒದಗಿಸಿಕೊಡಲಾಗುವುದೇ?

ಉ) ಸಂತೇಮಾರಹಳ್ಳಿ ಕ್ಷೇತ್ರಕ್ಕೆ ಹೊಸ ಬಸ್ಸುಗಳನ್ನು ಹಾಗೂ ಹೊಸ ಮಾರ್ಗಗಳನ್ನು ಕಲ್ಪಿಸಿಕೊಡಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಸಂತೇಮಾರಹಳ್ಳಿಯು ಚಾಮರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿ ರಾಷ್ಟ್ರೀಕೃತವಲ್ಲದ ವಲಯದಲ್ಲಿ ಇರುತ್ತದೆ. ಆದ್ದರಿಂದ ಕ.ರಾ.ರ.ಸಾ. ಸಂಸ್ಥೆಯು ಬಸ್ಸುಗಳ ಕಾರ್ಯಾಚರಣೆ ಮಾಡಿರುವುದಿಲ್ಲ. ಆದಾಗ್ಯೂ ಕ.ರಾ.ರ.ಸಾ. ಸಂಸ್ಥೆಯು 11 ಸಾರಿಗೆ ಸೇವೆಗಳನ್ನು ಸಂತೇಮಾರಹಳ್ಳಿ ಮುಖಾಂತರ ಹಾದು ಹೋಗುವಂತೆ ಕಾರ್ಯಾಚರಣೆಗೊಳಿಸುತ್ತಿದೆ.

ಆ) ಎಲ್ಲಾ 11 ಬಸ್ಸುಗಳು ಉತ್ತಮ ಸುಸ್ಥಿತಿ ಯಲ್ಲಿರುತ್ತದೆ.

ಇ) ರಾಷ್ಟ್ರೀಕೃತವಲ್ಲದ ವ್ಯಾಪ್ತಿಯಲ್ಲಿ ಇರುವುದರಿಂದ ಬಸ್ಸುಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ರಾಷ್ಟ್ರೀಕೃತವಲ್ಲದ ವ್ಯಾಪ್ತಿಯಲ್ಲಿ ಬರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಾರಿಗೆ ಸಚಿವರನ್ನು ಸಂತೆ ಮಾರಹಳ್ಳಿಕ್ಷೇತ್ರದಲ್ಲಿ ಸರ್ಕಾರಿ ಬಸ್ಸುಗಳು ಎಷ್ಟು ಓಡುತ್ತಿವೆ ಎಂದು ಕೇಳಿದೆ, ಆದರೆ ಸನ್ಮಾನ್ಯ ಸಾರಿಗೆ ಸಚಿವರು ರಾಷ್ಟ್ರೀಕೃತ ವಲಯದಲ್ಲಿ ಸಂತೆಮಾರಹಳ್ಳಿ ಕ್ಷೇತ್ರವು ಬರುತ್ತದೆ ಆದಾಗ್ಯೂ ಕೂಡ 11 ಬಸ್ಸುಗಳನ್ನು ನಾವು ಆ ಮಾರ್ಗದಲ್ಲಿ ಬಿಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಜೊತೆ ಆ ಕ್ಷೇತ್ರದಲ್ಲಿ ಸರ್ಕಾರೀ ಬಸ್ಸುಗಳನ್ನು ಹಿಂದಕ್ಕೆ ಪಡೆಯಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ರಾಷ್ಟ್ರೀಕೃತ ವಲಯದಲ್ಲಿ ರಸ್ತೆಗಳು ಇರುವುದರಿಂದ ಆ ಬಸ್‌ಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು

ಹೇಳುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮಕ್ಷೇತ್ರದ ಗ್ರಾಮಗಳಲ್ಲಿ ಸರ್ಕಾರ ಬಸಗಳನ್ನು ಒದಗಿಸಲಾಗಿತ್ತು, ಆದರೆ ಈಗ ಗ್ರಾಮೀಣ ಪ್ರದೇಶದಲ್ಲಿ ಬಸಗಳನ್ನು ಹಿಂದಕ್ಕೆ ಪಡೆದಿದ್ದಾರೆ. ಆದ್ದರಿಂದ ಅದನ್ನು ಮತ್ತೆ ರೆಸ್ಟೋರ್ ಮಾಡಿಕೊಡಬೇಕೆಂದು ಕೂಡ ಕೇಳಿದ್ದೇವೆ. ಆದರೆ ಈಗಾಗಲೇ ನಮ್ಮಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂತಹ ನೇರಳೆ, ಹಳೇಪುರ, ಕೋಡನಾಗಪುರ ಮತ್ತು ಹುಸನೂರು ಕಗ್ಗನವಾಡ ಗ್ರಾಮಗಳಲ್ಲಿ ಸರ್ಕಾರಿ ಬಸುಗಳನ್ನು ವಿತಡ್ರಾ ಮಾಡಿದ್ದಾರೆ. ಅದನು ರೆಸ್ಟೋರ್ ಮಾಡಬೇಕೆಂದು ಹೇಳಿದೆ. ಆದರೆ ಅವರು ಅದು ರಾಷ್ಟ್ರೀಕೃತ ವಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅಲ್ಲಿ ಬಸಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಸಾರಿಗೆ ಸಚಿವರು ಉತ್ತರ ಕೊಡಬೇಕೆಂದು ತಮ್ಮಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಇದು ನಾನು ಮನಾಪಲಿ ಏರಿಯಾ ಇರುವುದರಿಂದ ನಮ್ಮ ಬಸಗಳನ್ನು ಅಲ್ಲಿ ಓಡಿಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಆದರೆ ಬೇರೆ ಊರುಗಳಿಂದ ಸಂತೇಮರಹಳ್ಳಿ ಮುಖಾಂತರ ಹೋಗತಕ್ಕಂತಹ 11 ಬಸ್ಸುಗಳು ಅಲ್ಲಿ ಓಡುತ್ತಿವೆ. ಬೇರೆ ಬಸ್ಸುಗಳನ್ನು ಸಂತೆಮರಹಳ್ಳಿಗೆ ಓಡಿಸುತ್ತಿದ್ದರೆ ಮಾತ್ರ ಅಲ್ಲಿಗೆ ಹೋಗುವ ಪ್ರಶ್ನೆ ಬರುತ್ತದೆ, ಅಥವಾ ಹೊಸದಾಗಿ ಕೊಡುವ ಪ್ರಶ್ನೆ ಬರುತ್ತದೆ. ಆದರೂ ಸಹಿತ ಕೆಲವೊಂದು ವಿಶೇಷವಾದ ಪ್ರಕರಣಗಳಲ್ಲಿ ಏನಾದರೂ ಅನುಕೂಲ ಮಾಡುವುದಕ್ಕೆ ಸಾಧ್ಯವಿದ್ದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಸಂತೇಮರಹಳ್ಳಿ ಮುಖೇನ ಎಂದು ಪ್ರಶ್ನೆಯಲ್ಲಿ ಕೇಳಲಿಲ್ಲ, ಸಂತೆಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರತಕ್ಕಂತಹ ಬಸ್ಸುಗಳನ್ನು ರೆಸ್ಟೋರ್ ಮಾಡಬೇಕೆಂದು ಹೇಳಿದ್ದೇನೆ. ಅದನ್ನು ಪರಿಶೀಲನೆ ಮಾಡಿ ದಯಮಾಡಿ ಅದನ್ನು ರೆಸ್ಟೋರ್ ಮಾಡಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕಿ ಗುರುತಿಲ್ಲದ ಪ್ರಶ್ನೆಗಳ ದಿನಾಂಕ 1994ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ "18 ಪ್ರಶ್ನೆಗಳ ಉತ್ತರವನ್ನು ತಮ್ಮ ಅನುಮತಿ ಪಡೆದು ಸದನದಲ್ಲಿ ಮಂಡಿಸುತ್ತಿದ್ದೇನೆ.

ಬಸ್ ಪ್ರಯಾಣದರ ಕುರಿತು.

561 - ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸ್ ಪ್ರಯಾಣ ದರವನ್ನು ಸರ್ಕಾರ ನಿರ್ಧಾರ ಮಾಡಿದೆಯೇ?